ಆಟೊ ಚೆನ್ನೈನ ನುಂಗಂಬಾಕಂ ಮೇನ್ ರೋಡ್ ಬಳಸಿ ಓಡುತ್ತಿತ್ತು. ಅಕ್ಕಪಕ್ಕ ಕಾಣುತ್ತಿದ್ದ ಅಣ್ಣಾಸಲೈ, ಟಿ. ನಗರ, ಚೆಟ್ಟಿನಾಡ್ ಹೋಟೆಲ್... ಮುಂತಾದವುಗಳತ್ತ ಕಣ್ಣು ಹಾಯಿಸುತ್ತ ಕುಳಿತಿದ್ದೆ. ಮೊದಲ ಬಾರಿ ಚೆನ್ನೈಗೆ ಬಂದಿದ್ದೆನಲ್ಲ... ಅದೂ ಅಮೆರಿಕೆಯ ವೀಸಾಗೋಸ್ಕರ. ಕೆಲದಿನಗಳ ಹಿಂದೆ ಅನಂತನಿಗೆ "ನನಗೇಕೋ ವೀಸಾ? ಹೇಗೂ ನಿಮ್ಮತ್ತೆ ಪದ್ಮಿನಿ ಬರುತ್ತಾರಲ್ಲ... 'ಮೊದಲ ಬಾಣಂತನ... ನಮ್ಮದೇ ಜವಾಬ್ದಾರಿ. ಹೋಗಿ ಮೊಮ್ಮಗೂನ ಎತ್ತಾಡಿಸಿ ಬರ್ತೇವೆ' ಎಂದು ಹೇಳಿದ್ದಾರೆ. ಮುಂದೆ ನೀವೇ ಬಂದ್ಬಿಡ್ತೀರಲ್ಲ" ಎಂದಿದ್ದೆ. "ಹೌದಮ್ಮ, ಆದರೂ ಈಗ್ಲೇ ಮಾಡಿಸಿಟ್ಬಿಡು. ಎಮರ್ಜನ್ಸಿ ಬಂದ್ರೆ ಬೇಕಾಗುತ್ತೇಂತ. ಇಬ್ಬರದೂ ವೀಸಾ ಫೀಸ್ ಕಟ್ಟಿ ಅಪಾಯಿಂಟ್‌ಮೆಂಟ್ ಒಟ್ಟಿಗೆ ತೊಗೊತೀನಿ. ನೀನು ಸುಮಂತನ್ನ ಜೊತೆ ಮಾಡ್ಕೊಂಡು ಹೋಗು..." ಎಂದು ಪೀಠಿಕೆ ಹಾಕಿದ್ದ. ಹಿಂದೆಯೇ ವಿಡಿಯೊ ಕಾಲ್‌ನಲ್ಲಿ ಮುಖ ತೂರಿಸಿದ ಸೊಸೆ "ನೀವೂ ಮಾಡಿಸಿಟ್ಬಿಡಿ ಅಮ್ಮ, ಅಗತ್ಯ ಬಿದ್ರೆ ಬೇಕಾಗುತ್ತೆ" ಎಂದಿದ್ದಳು. ಏಳು ತಿಂಗಳ ಗರ್ಭಿಣಿಯನ್ನು ನೋಡಿ ಕರುಳು 'ಚುರ್'ಎಂದಿತು. ಏನೇ ತಪ್ಪುಒಪ್ಪುಗಳಿದ್ರೂ ನನ್ನ 'ಸೊಸೆ' ಅನ್ನೋದು ಸುಳ್ಳಲ್ವಲ್ಲಾ... ಎನಿಸಿ ಒಪ್ಪಿಕೊಂಡೆ. ಜೊತೆಗೆ 'ಸುಮಂತಂಗೂ ವೀಸಾ ಮಾಡಿಸ್ಬಿಡೋ... ಒಂದ್ಸಲಿ ಕರೆಸಿಕೋ' ಎಂಬ ಹೃದಯದ ಮಾತು ತುದಿನಾಲಿಗೆಯವರೆಗೆ ಬಂದರೂ ಒಳಗೇ ನುಂಗಿದೆ. ಮತ್ತೆ ರಾದ್ಧಾಂತಕ್ಕೆ ಕಾರಣವಾಗಬಾರದಲ್ಲ.

ನೂರೆಂಟು ಯೋಚನೆಗಳು ಪೆಟ್ರೋಲಿಲ್ಲದೇ ತಲೆಯಲ್ಲಿ ಓಡುತ್ತಿದ್ದಾಗ ಎದುರಿಗೇ ಬೀಗರ ಪೆಟ್ರೋಲಿನ ಟ್ಯಾಕ್ಸಿ ಹೆಮ್ಮೆಯಿಂದ 'ರೆಸಿಡೆನ್ಸಿ ಟವರ್'ನತ್ತ ಸಾಗಿತು. ಸಲಾಮು ಹೊಡೆದ ಸ್ಟಾರ್ ಹೋಟೆಲ್‌ನ ವಾಚ್‌ಮನ್ ಲಗೇಜ್ ಇಳಿಸಿಕೊಂಡ. ನಮ್ಮ ಆಟೊ ಕೂಡ ಅಲ್ಲಿಗೆ ತುಸುದೂರದಲ್ಲಿನ ಗೆಸ್ಟ್‌ಹೌಸ್ ಮುಂದೆ ನಿಂತಿತು. ನನ್ನ ದೃಷ್ಟಿ ಹರಿದತ್ತ ನೋಡಿದ ಸುಮಂತ "ಅಣ್ಣಂಗ್ಹೇಳಿದ್ರೆ ನಿನಗೂ ಆ ಫೈವ್‌ಸ್ಟಾರ್ ಹೋಟೆಲ್‌ನಲ್ಲೇ ರೂಮ್ ಮಾಡಿಕೊಡೋನು..." ಎಂದ. ನಾನು ನಿಧಾನವಾಗಿ ಇಳಿಯುತ್ತ "ಬೇಡ ಬಿಡಪ್ಪ. ಎರಡು ದಿನಕ್ಕೆ ಸುಮಾರು ಇಪ್ಪತ್ತು ಸಾವಿರ ರೂಪಾಯಿಗಳಂತೆ. ಊಟ, ತಿಂಡಿ ಬೇರೆ. ತಿಂದ ಹಾಗಲ್ಲ... ಉಂಡ ಹಾಗಲ್ಲ. ಸುಮ್ನೆ ದುಡ್ಡು ದಂಡ. ನಮಗಿದೇ ಸಾಕು ಬಾ" ಎಂದು ಬ್ಯಾಗ್ ಎಳೆದುಕೊಂಡು ನಡೆದೆ. "ನಿಂದ್ಯಾವಾಗ್ಲೂ ಇಷ್ಟೇ ಆಯ್ತುಮ್ಮಾ. ಅನುಭವಿಸ್ಲಿಕ್ಕೂ ಕೇಳಿಕೊಂಡು ಬಂದಿರಬೇಕು" ಎಂದವ ಬಿರಬಿರನೇ ನನಗಿಂತಲೂ ಮೊದಲು ಹೆಜ್ಜೆ ಹಾಕಿದ. 'ಅತ್ತೆ, ಮಾವಂಗೆ ಬೇರೆ ಮಾತು. ನಮಗಂದ್ರೆ ಸ್ಟಾರ್ ಹೋಟೆಲ್‌ನಲ್ಲಿ ರೂಮ್ ಮಾಡ್ತಿದ್ನೋ ಇಲ್ವೋ ನಿಮ್ಮಣ್ಣ' ಎನ್ನುವ ಅನುಮಾನದ ಮಾತು ಹೊರಗೆ ಬರಲಿಲ್ಲ. ನಿಟ್ಟುಸಿರಿಟ್ಟು ಅವನ ಹಿಂದೆ ನಡೆದೆ.

ಅದೇನು ಮಾತೋ ಈ ಹುಡುಗಂದು. ತುಂಬಾ ನೇರ ನೇರ... ದಿಟ್ಟ... ನಿರಂತರ ಅಂತ ಟಿ.ವಿ. ವಾಹಿನಿಗಳವರು ವಾರ್ತೆಗಳಿಗೆ ಹೇಳ್ತಾ ಇರ್ತಾರಲ್ಲ... ಹಾಗೆ. ಇದ್ದಿದ್ದನ್ನ ಇದ್ದ ಹಾಗೇ ಹೇಳೋದು. ಒಳ್ಳೆಯದೋ... ಕೆಟ್ಟದ್ದೋ... ಗೊತ್ತಿಲ್ಲ. ಬಿಟ್ಟ ಬಾಣಗಳಂತೆ ಅವು ಎದೆಗೆ ಇರಿದು ಹೋಗುತ್ತವೆ. "ಹಾಗೆ ಮಾತಾಡ್ಬೇಡ್ವೋ..." ಅಂದ್ರೆ ಕೇಳಲ್ಲ. ಉಳಿದವರೆಲ್ಲಾ 'ಒರಟ' ಅಂತ ಬಿರುದು ಕೊಡ್ತಾರೆ. ಆದರೆ ಮಾತೃಹೃದಯಕ್ಕೆ ಗೊತ್ತು. ಅವನ ಮನಸ್ಸು 'ಬೆಣ್ಣೆ ಥರಾ' ಅಂತ. ದೇವರು ಕೊಟ್ಟ ಇಬ್ಬರು ಮಕ್ಕಳಲ್ಲಿ ಎಷ್ಟೊಂದು ವ್ಯತ್ಯಾಸವಿಟ್ಟಿದ್ದಾನೆ... ದೊಡ್ಡವ ಅನಂತ ತುಂಬಾ ಮೃದುಭಾಷಿ. ಧ್ವನಿಯೇರಿಸಿದ್ದೇ ಕಡಿಮೆ. ನಾನು ನೋಡಿದಂತೆ ಅವನು ಜೋರು ಮಾಡಿದ್ದು ಒಂದೇ ಬಾರಿ. ಅದೂ ತಮ್ಮನಿಗೆ... "ಬಿ.ಕಾಂ. ಮಾಡಿ ಏನ್ಮಾಡ್ತೀಯೋ... ಅಷ್ಟಕ್ಕೇ ಒಳ್ಳೇ ಕೆಲಸ ಸಿಗಲ್ಲ. ಅಕಸ್ಮಾತ್ ಕೆಲಸ ಸಿಕ್ಕರೂ ಮದುವೆಗೆ ಹುಡುಗಿ ಸಿಗಲ್ಲ. ಸಿ.ಎ.ನೋ... ಐ.ಸಿ.ಡಬ್ಲ್ಯು.ನೋ ಓದಿದ್ರೆ ಬೆಲೆ ಇರುತ್ತೆ. ಆದ್ರೆ ಅದನ್ನ ಮುಗಿಸೋವರ್ಗೂ ತಲೇಲಿ ಬಿಳಿಕೂದಲಾಗಿಬಿಟ್ಟಿರ್ತವೆ. ನಿನ್ನ ಜೊತೆಯವರು ಎರಡು

